ಕಾಳಜಿ ಇದೆ. ಅವರು ಪ್ರಮಾಣ ವಚನವನ್ನು ತೆಗೆದುಕೊಳ್ಳಬೇಕಾದರೆ ರೈತರ ಹೆಸರಿನಲ್ಲಿ ತೆಗೆದುಕೊಂಡಿದ್ದಾರೆ. ಇವತ್ತು ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರ ಮೇಲೆ ಹೇಳುತ್ತಿದ್ದಾರೆ. ಈ ವಿಷಯದಲ್ಲಿ ಕಳೆದ ಸಾರಿ ಏನಾಯಿತು? ಹೊಸ ಸರ್ಕಾರ ಬಂತು, ಹಾಗಾಗಿ ಮಾಡುವುದಕ್ಕಾಗಲಿಲ್ಲ ಎನ್ನುವುದನ್ನು ಒಪ್ಪಿಕೊಳ್ಳೋಣ. ಈಗ ಸರ್ಕಾರ ಬಂದು ಒಂದು ವರ್ಷವಾಗಿದೆ. ಒಂದು ವರ್ಷದಲ್ಲಿ ಈ ಸರ್ಕಾರ ಏನು ಮಾಡುತ್ತಿದೆ? ಇದರ ಬಗ್ಗೆ ಏನು ಚಿಂತನೆಯನ್ನು ಮಾಡಿದೆ? ಇದೆಲ್ಲವನ್ನು ನಾವು ಕೃಷಿ ಇಲಾಖೆಯ ಬೇಡಿಕೆಯಲ್ಲಿ ಮಾತನಾಡುವುದಕ್ಕೆ ಆಗುತ್ತದೆಯೇ? ಇವರು ಕೇಂದ್ರ ಸರ್ಕಾರದ ಮೇಲೆ ಹೇಳುತ್ತಾರೆ. ಮುಖ್ಯಮಂತ್ರಿಗಳು ಒಂದು ಕಡೆ, ನಮ್ಮಲ್ಲಿ ಗೊಬ್ಬರ ಇದೆ, ಗೊಬ್ಬರದ ಕೊರತೆ ಇಲ್ಲ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಕೃಷಿ ಸಚಿವರು 20 ಸಾವಿರ ಟನ್ ಗೊಬ್ಬರ ಇದೆ ಎಂದು ಹೇಳುತ್ತಾರೆ. ಈ ವಿಷಯವನ್ನು ನಾವು ಕೃಷಿ ಇಲಾಖೆಯ ಬೇಡಿಕೆಯಲ್ಲಿ ಚರ್ಚೆ ಮಾಡುವುದಕ್ಕಾಗುತ್ತದೆಯೇ? ಇದು ಅತಿ ಗಂಭೀರವಾದಂಥ ವಿಷಯ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ತಂದಿದ್ದಾರೆ, ದಯಮಾಡಿ ಕಾನೂನು ಸಚಿವರು ಇದನ್ನು ಚರ್ಚೆಗೆ ಒಪ್ಪಿಕೊಳ್ಳಬೇಕಾಗುತ್ತದೆ. ಈ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇದ್ದರೆ, ಇದನ್ನು ಕೂಡಲೇ ಒಪ್ಪಿಕೊಳ್ಳಬೇಕಾಗುತ್ತದೆ. ಇದಕ್ಕೆ ಒಂದು ಗಂಟೆಯಲ್ಲ, ಒಂದು ದಿವಸ ಬೇಕಾದರೂ ರೂಲ್ 60 ಅಡಿಯಲ್ಲಿ ನಿಲುವಳಿ ಸೂಚನೆಯಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ನಾನು ಮಾನ್ಯ ಸಭಾಧ್ಯಕ್ಷರಲ್ಲಿ ವಿನಂತಿ ಮಾಡುತ್ತೇನೆ.

5. ಸಭಾಧ್ಯಕ್ಷರ ತೀರ್ಪು:–

ವಿಷಯ: ರಾಜ್ಯದಲ್ಲಿ ರಸಗೊಬ್ಬರ ಕೊರತೆ ಬಗ್ಗೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಗೌರವಾನ್ವಿತ ಸದಸ್ಯರು ಇವತ್ತು ರಾಜ್ಯದಲ್ಲಿರುವ ರಸಗೊಬ್ಬರ ಕೊರತೆಯ ಬಗ್ಗೆ ನಿಲುವಳಿ ಸೂಚನೆಯ ಮುಖಾಂತರ ಇಲ್ಲಿ ಪ್ರಸ್ತಾಪವನ್ನು ಮಾಡಿದ್ದಾರೆ. ಈಗಾಗಲೇ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ತಮ್ಮ ಚರ್ಚೆಗೆ ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ, ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆ ಇವತ್ತು ಇದೆ ಎನ್ನುವುದನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಆ ವಿಷಯಕ್ಕೆ ಸಮಬಂಧಪಟ್ಟಂತೆ ಚರ್ಚೆ ಮಾಡುವ ಸಂದರ್ಭದಲ್ಲಿ ಈ ವಿಷಯವನ್ನೂ ಪ್ರಸ್ತಾಪ ಮಾಡಬಹುದು ಎನ್ನುವ ಅಭಿಪ್ರಾಯವನ್ನು ಮಾನ್ಯ ಕಾನೂನು ಸಚಿವರು ವ್ಯಕ್ತಪಡಿಸಿದ್ದಾರೆ. ಅವರ ಅಭಿಪ್ರಾಯವನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಹಿಂದೆ ಇಂಥ ಪರಿಸ್ಥಿತಿಗಳು ಬಂದಾಗ ಹಿಂದಿನ ಸಭಾಧ್ಯಕ್ಷರು

ಹಲವಾರು ತೀರ್ಪುಗಳನ್ನು ಕೊಟ್ಟಿದ್ದಾರೆ. ಮತ್ತೊಂದು ರೂಪದಲ್ಲಿ ಚರ್ಚೆ ಮಾಡಲು ಅವಕಾಶವಿರುವಾಗ ಅದನ್ನು ನಿಲುವಳಿ ಸೂಚನೆಯ ಮುಖಾಂತರ ಚರ್ಚೆ ಮಾಡಲು ಅವಕಾಶವಿಲ್ಲ ಎನ್ನುವ ಬಗ್ಗೆ ಸಾಕಷ್ಟು ತೀರ್ಪುಗಳು ಇವೆ. ಕೌಲ್ ಅಂಡ್ ಶಕ್ದರ್‌ರವರ Parliamentary Practice and Procedure ಪುಸ್ತಕದಲ್ಲಿಯೂ ಈ ರೀತಿಯ incidents ಇವೆ. ಆ ಹಿನ್ನಲೆಯಲ್ಲಿ, ಈ ಒಂದು ನಿಲುವಳಿ ಸೂಚನೆಯನ್ನು ನಾನು ತಿರಸ್ಕಾರ ಮಾಡುತ್ತಿದ್ದೇನೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಗೌರವಾನ್ವಿತ ಸದಸ್ಯರು, ಇವತ್ತು ಇಡೀ ರಾಜ್ಯದಲ್ಲಿ ರಸ ಗೊಬ್ಬರದ ಕೊರತೆಯಿದ್ದು, ಹಲವಾರು ಕಡೆ ಗೊಂದಲಗಳು ನಡೆದಿವೆ, ಹಾಗಾಗಿ ಆ ವಿಷಯವನ್ನು ಜರೂರಾಗಿ ಪ್ರಸ್ತಾಪ ಮಾಡಬೇಕು, ಅದಕ್ಕೆ ಆದ್ಯತೆ ಸಿಗಬೇಕು ಎನ್ನುವಂಥ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆ ಹಿನ್ನಲೆಯಲ್ಲಿ ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕು ಎನ್ನುವ ದೃಷ್ಟಿಯಿಂದ, ರೂಲ್ 60 ಇದ್ದುದ್ದನ್ನು ರೂಲ್ 69ಕ್ಕೆ ನಾನು ಪರಿವರ್ತನೆ ಮಾಡಿ ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತಿದ್ದೇನೆ.

6. ಪ್ರಕಟಣೆ

ಅಧ್ಯಕ್ಷರು: ಇವತ್ತು ಮಧ್ಯಾಹನ ಮಾನ್ಯ ಸಚಿವರಾದ ಬಸವರಾಜ ಬೊಮ್ಮಾಯಿಯವರು ಮಾನ್ಯ ಶಾಸಕರ ಗೌರವಾರ್ಥ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಔತಣಕೂಟವನ್ನು ಏರ್ಪಡಿಸಿರುತ್ತಾರೆ. ತಾವು ದಯಮಾಡಿ ಅದರಲ್ಲಿ ಭಾಗವಹಿಸಬೇಕೆಂದು ಕೋರಿದೆ.

ಈ ಚರ್ಚೆಯನ್ನು ನಾವು ಮಧ್ಯಾಹ್ನ ಊಟದ ನಂತರ ಮುಂದುವರೆಸೋಣ. ಈಗ ಸದನವನ್ನು ಮಧ್ಯಾಹ್ನ 3 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಭೋಜನಕ್ಕಾಗಿ ಮಧ್ಯಾಹ್ನ 1.43 ಗಂಟೆಗೆ ಮುಕ್ತಾಯಗೊಂಡು ಪುನಃ 3.00 ಗಂಡೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

ಸದನವು ಪುನಃ ಮಧ್ಯಾಹ್ನ 3–07 ಗಂಟೆಗೆ ಸಮಾವೇಶಗೊಂಡಿತು.
(ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

ಅಧ್ಯಕ್ಷರು: ಈಗ ಎರಡು ವಿಷಯಗಳು Rule 69 ಅಡಿಯಲ್ಲಿ ಚರ್ಚೆಗಿದ್ದು ಯಾವ ವಿಷಯವನ್ನು ತಾವು ಚರ್ಚೆಗೆ ತೆಗೆದುಕೊಳ್ಳುತ್ತೀರಿ?

ಶ್ರೀ ಸಿದ್ದರಾಮಯ್ಯ(ವಿರೋಧ ಪಕ್ಷದ ನಾಯಕರು): ಮೈಸೂರು ಘಟನೆಯ ಸಂಬಂಧ ಇರುವ ವಿಷಯವನ್ನು ಮೊದಲು ಚರ್ಚಿಸುತ್ತೇವೆ. It is already in the agenda.

ಅಧ್ಯಕ್ಷರು: O.K.